सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ರಾಷ್ಟ್ರೀಯ ತನಿಖಾ ಏಜೆನ್ಸಿ ಅಧಿನಿಯಮ, 2008

(2008ರ ಅಧಿನಿಯಮ ಸಂಖ್ಯೆ 34)

[1ನೇ ಮೇ, 2011 ರಂದು ಜಾರಿಯಲ್ಲಿದ್ದಂತೆ]

# THE NATIONAL INVESTIGATION AGENCY ACT, 2008

(Act No. 34 of 2008)

[As on 1st May, 2011]

## ಮುನ್ನುಡಿ

1ನೇ ಮೇ, 2011 ರಂದು ಜಾರಿಯಲ್ಲಿದ್ದಂತೆ, ದಿ ನ್ಯಾಷನಲ್ ಇನ್‌ವೆಸ್ಟಿಗೇಷನ್ ಏಜೆನ್ಸಿ ಆ್ಯಕ್ಟ್, 2008 (2008ರ 34) ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 06.04.2012 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 48ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 197 ರಿಂದ 208ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

**ವಿ.ಕೆ. ಭಸೀನ್**
**ನವದೆಹಲಿ** **ಕಾರ್ಯದರ್ಶಿ**
**ಭಾರತ ಸರ್ಕಾರ**

## PREFACE

This edition of the National Investigation Agency Act, 2008 (34 of 2008) as on the 1st May, 2011 contains the authoritative text of that Act in Kannada which was published in the Gazette of India Extraordinary, Part IX, Section 1, No. 1, Vol. 48, dated 06.04.2012 on pages 197 to 208.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

**V.K. BHASIN**
**New Delhi** Secretary
Government of India

# ರಾಷ್ಟ್ರೀಯ ತನಿಖಾ ಏಜೆನ್ಸಿ ಅಧಿನಿಯಮ, 2008

## ಪ್ರಕರಣಗಳ ಅನುಕ್ರಮಣಿಕೆ


**ಪ್ರಕರಣಗಳು:** **ಪುಟಗಳು**

**ಅಧ್ಯಾಯ – I**

**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಅನ್ವಯ 1
2. ಪರಿಭಾಷೆಗಳು 1

**ಅಧ್ಯಾಯ – II**

**ರಾಷ್ಟ್ರೀಯ ತನಿಖಾ ಏಜೆನ್ಸಿ**

3. ರಾಷ್ಟ್ರೀಯ ತನಿಖಾ ಏಜೆನ್ಸಿಯ ರಚನೆ 2
4. ರಾಷ್ಟ್ರೀಯ ತನಿಖಾ ಏಜೆನ್ಸಿಯ ಅಧೀಕ್ಷಣೆ 2
5. ಏಜೆನ್ಸಿಯ ರಚನೆಯ ರೀತಿ ಮತ್ತು ಸದಸ್ಯರ ಸೇವಾ ಷರತ್ತುಗಳು 3

**ಅಧ್ಯಾಯ – III**

**ರಾಷ್ಟ್ರೀಯ ತನಿಖಾ ಏಜೆನ್ಸಿಯಿಂದ ತನಿಖೆ**

6. ಅನುಸೂಚಿತ ಅಪರಾಧಗಳ ತನಿಖೆ 3
7. ತನಿಖೆಯನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲು ಅಧಿಕಾರ 4
8. ಸಂಬಂಧಿತ ಅಪರಾಧಗಳ ತನಿಖೆಗೆ ಅಧಿಕಾರ 4
9. ರಾಜ್ಯ ಸರ್ಕಾರವು ರಾಷ್ಟ್ರೀಯ ತನಿಖಾ ಏಜೆನ್ಸಿಗೆ ನೆರವು ನೀಡುವುದು 4
10. ಅನುಸೂಚಿತ ಅಪರಾಧಗಳ ಬಗ್ಗೆ ತನಿಖೆ ಮಾಡಲು ರಾಜ್ಯ ಸರ್ಕಾರದ ಅಧಿಕಾರ 4

**ಅಧ್ಯಾಯ – IV**

**ವಿಶೇಷ ನ್ಯಾಯಾಲಯಗಳು**

11. ವಿಶೇಷ ನ್ಯಾಯಾಲಯಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ 4
12. ಉಪವೇಶನದ ಸ್ಥಳ 5
13. ವಿಶೇಷ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ 5
14. ಇತರ ಅಪರಾಧಗಳಿಗೆ ಸಂಬಂಧಪಟ್ಟಂತೆ ವಿಶೇಷ ನ್ಯಾಯಾಲಯಗಳ ಅಧಿಕಾರಗಳು 6
15. ಪಬ್ಲಿಕ್ ಪ್ರಾಸಿಕ್ಯೂಟರುಗಳು 7
16. ವಿಶೇಷ ನ್ಯಾಯಾಲಯಗಳ ಪ್ರಕ್ರಿಯೆ ಮತ್ತು ಅಧಿಕಾರಗಳು 7

17. ಸಾಕ್ಷಿದಾರರಿಗೆ ರಕ್ಷಣೆ 8
18. ಪ್ರಾಸಿಕ್ಯೂಷನ್ ಹೂಡಲು ಮಂಜೂರಾತಿ 9
19. ವಿಶೇಷ ನ್ಯಾಯಾಲಯವು ನಡೆಸುವ ಅಧಿವಿಚಾರಣೆಗೆ ಪ್ರಾಶಸ್ತ್ಯ 9
20. ನಿಯತ ನ್ಯಾಯಾಲಯಗಳಿಗೆ ಮೊಕದ್ದಮೆಗಳನ್ನು ವರ್ಗಾಯಿಸಲು ಅಧಿಕಾರ 9
21. ಅಪೀಲುಗಳು 9
22. ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರದ ಅಧಿಕಾರ 10

**ಅಧಿಕಾರ ಅಧ್ಯಾಯ – V**

**ಸಂಕೀರ್ಣ**

23. ನಿಯಮಗಳನ್ನು ರಚಿಸಲು ಉಚ್ಚ ನ್ಯಾಯಾಲಯದ ಅಧಿಕಾರ 11
24. ತೊಂದರೆಗಳನ್ನು ನಿವಾರಿಸಲು ಅಧಿಕಾರ 11
25. ನಿಯಮಗಳನ್ನು ರಚಿಸಲು ಅಧಿಕಾರ 11
26. ನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು 11
ಅನುಸೂಚಿ 12

# ರಾಷ್ಟ್ರೀಯ ತನಿಖಾ ಏಜೆನ್ಸಿ ಅಧಿನಿಯಮ, 2008

## (2008ರ ಅಧಿನಿಯಮ ಸಂಖ್ಯೆ 34)

[31ನೇ ಡಿಸೆಂಬರ್, 2008]

ಭಾರತದ ಸಾರ್ವಭೌಮತೆಗೆ, ಭದ್ರತೆಗೆ ಮತ್ತು ಅಖಂಡತೆಗೆ, ರಾಜ್ಯದ ಭದ್ರತೆಗೆ, ವಿದೇಶೀ ರಾಷ್ಟ್ರಗಳೊಂದಿಗಿನ ಸ್ನೇಹಪರ ಸಂಬಂಧಗಳಿಗೆ ಬಾಧಕವನ್ನುಂಟು ಮಾಡುವ ಅಪರಾಧಗಳ ಬಗ್ಗೆ ಹಾಗೂ ವಿಶ್ವಸಂಸ್ಥೆ, ಅದರ ಏಜೆನ್ಸಿಗಳು ಮತ್ತು ಇತರ ಅಂತರರಾಷ್ಟ್ರೀಯ ಸಂಘಟನೆಗಳ ಅಂತರರಾಷ್ಟ್ರೀಯ ಕೌಲುಗಳು, ಒಪ್ಪಂದಗಳು, ಒಡಂಬಡಿಕೆಗಳು ಮತ್ತು ಗೊತ್ತುವಳಿಗಳನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಅಧಿನಿಯಮಿಸಿದ ಅಧಿನಿಯಮಗಳ ಮೇರೆಗಿನ ಅಪರಾಧಗಳ ಬಗ್ಗೆ ತನಿಖೆ ಮಾಡಲು ಮತ್ತು ಪ್ರಾಸಿಕ್ಯೂಟ್ ಮಾಡಲು ರಾಷ್ಟ್ರೀಯ ಮಟ್ಟದಲ್ಲಿ ತನಿಖಾ ಏಜೆನ್ಸಿಯೊಂದನ್ನು ರಚಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಐವತ್ತೊಂಬತ್ತನೇ ವರ್ಷದಲ್ಲಿ, ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಅನ್ವಯ.–** (1) ಈ ಅಧಿನಿಯಮವನ್ನು ರಾಷ್ಟ್ರೀಯ ತನಿಖಾ ಏಜೆನ್ಸಿ ಅಧಿನಿಯಮ, 2008 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ ಮತ್ತು ಇದು,–

(ಎ) ಭಾರತದ ಹೊರಗಿರುವ ಭಾರತದ ನಾಗರಿಕರಿಗೆ;

(ಬಿ) ಸರ್ಕಾರದ ಸೇವೆಯಲ್ಲಿರುವ ವ್ಯಕ್ತಿಗಳು ಎಲ್ಲಾದರೂ ಇರಲಿ ಅವರಿಗೆ; ಮತ್ತು

(ಸಿ) ಭಾರತದಲ್ಲಿ ನೋಂದಾಯಿತವಾದ ಹಡಗುಗಳಲ್ಲಿ ಮತ್ತು ವಿಮಾನಗಳಲ್ಲಿ ಇರುವ ವ್ಯಕ್ತಿಗಳು ಎಲ್ಲಾದರೂ ಇರಲಿ, ಅವರಿಗೆ

– ಸಹ ಅನ್ವಯವಾಗುತ್ತದೆ.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಏಜೆನ್ಸಿ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿತವಾದ ರಾಷ್ಟ್ರೀಯ ತನಿಖಾ ಏಜೆನ್ಸಿ;

(ಬಿ) "ಸಂಹಿತೆ" ಎಂದರೆ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)

(ಸಿ) "ಉಚ್ಚ ನ್ಯಾಯಾಲಯ" ಎಂದರೆ ಯಾವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ವಿಶೇಷ ನ್ಯಾಯಾಲಯವು ಇದೆಯೋ ಆ ಉಚ್ಚ ನ್ಯಾಯಾಲಯ;

(ಡಿ) "ನಿಯಮಿಸಿದ" ಎಂದರೆ ನಿಯಮಗಳ ಮೂಲಕ ನಿಯಮಿಸಲಾದುದು;

(ಇ) "ಪಬ್ಲಿಕ್ ಪ್ರಾಸಿಕ್ಯೂಟರ್" ಎಂದರೆ 15ನೇ ಪ್ರಕರಣದ ಮೇರೆಗೆ ನೇಮಕಗೊಂಡ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಅಡಿಷನಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್;

(ಎಫ್) "ಅನುಸೂಚಿ" ಎಂದರೆ ಈ ಅಧಿನಿಯಮದ ಅನುಸೂಚಿ;

(ಜಿ) "ಅನುಸೂಚಿತ ಅಪರಾಧ" ಎಂದರೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಪರಾಧ;

(ಎಚ್) "ವಿಶೇಷ ನ್ಯಾಯಾಲಯ" ಎಂದರೆ 11ನೇ ಪ್ರಕರಣದ ಮೇರೆಗೆ ಅಥವಾ ಸಂದರ್ಭಾನುಸಾರ 22ನೇ ಪ್ರಕರಣದ ಮೇರೆಗೆ ರಚಿತವಾದ ವಿಶೇಷ ನ್ಯಾಯಾಲಯ;

(ಐ) ಈ ಅಧಿನಿಯಮದಲ್ಲಿ ಬಳಸಿರುವ ಆದರೆ ಪರಿಭಾಷಿಸಿರದ ಮತ್ತು ಸಂಹಿತೆಯಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು, ಸಂಹಿತೆಯಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

(2) ಯಾವುದೇ ಅಧಿನಿಯಮಿತಿಗೆ ಅಥವಾ ಅದರ ಯಾವುದೇ ಉಪಬಂಧಕ್ಕೆ ಈ ಅಧಿನಿಯಮದಲ್ಲಿ ಮಾಡಿರುವ ಯಾವುದೇ ಉಲ್ಲೇಖವನ್ನು, ಅಂಥ ಅಧಿನಿಯಮಿತಿಯು ಅಥವಾ ಅಂಥ ಉಪಬಂಧವು ಜಾರಿಯಲ್ಲಿಲ್ಲದ ಪ್ರದೇಶದ ಸಂಬಂಧದಲ್ಲಿ, ಆ ಪ್ರದೇಶದಲ್ಲಿ ಸಂವಾದಿ ಕಾನೂನು ಅಥವಾ ಸಂವಾದಿ ಕಾನೂನಿನ ಸುಸಂಗತ ಉಪಬಂಧ ಯಾವುದಾದರೂ ಜಾರಿಯಲ್ಲಿದ್ದರೆ ಅದಕ್ಕೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

## ಅಧ್ಯಾಯ – II

## ರಾಷ್ಟ್ರೀಯ ತನಿಖಾ ಏಜೆನ್ಸಿ

**3. ರಾಷ್ಟ್ರೀಯ ತನಿಖಾ ಏಜೆನ್ಸಿಯ ರಚನೆ.–** (1) ಪೊಲೀಸ್ ಅಧಿನಿಯಮ, 1861ರಲ್ಲಿ (1861ರ 5) ಏನೇ ಇದ್ದರೂ, ಕೇಂದ್ರ ಸರ್ಕಾರವು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಗಳ ಮೇರೆಗಿನ ಅಪರಾಧಗಳ ಬಗ್ಗೆ ತನಿಖೆ ಮಾಡಲು ಮತ್ತು ಪ್ರಾಸಿಕ್ಯೂಷನ್ ಹೂಡಲು ರಾಷ್ಟ್ರೀಯ ತನಿಖಾ ಏಜೆನ್ಸಿ ಎಂದು ಕರೆಯಲಾಗುವ ಒಂದು ವಿಶೇಷ ಏಜೆನ್ಸಿಯನ್ನು ರಚಿಸಬಹುದು.

(2) ಕೇಂದ್ರ ಸರ್ಕಾರವು ಈ ಬಗ್ಗೆ ಮಾಡಬಹುದಾದ ಯಾವುವೇ ಆದೇಶಗಳಿಗೆ ಒಳಪಟ್ಟು, ಏಜೆನ್ಸಿಯ ಅಧಿಕಾರಿಗಳು ಅನುಸೂಚಿತ ಅಪರಾಧಗಳ ತನಿಖೆಗೆ ಮತ್ತು ಅಂಥ ಅಪರಾಧಗಳಿಗೆ ಸಂಬಂಧಿಸಿದ ವ್ಯಕ್ತಿಗಳ ದಸ್ತಗಿರಿಗೆ ಸಂಬಂಧಪಟ್ಟಂತೆ, ಆ ಪ್ರದೇಶದಲ್ಲಿ ಎಸಗಿದ ಅಪರಾಧಗಳ ತನಿಖೆಗೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳು ಹೊಂದಿರುವ ಎಲ್ಲ ಅಧಿಕಾರಗಳನ್ನು, ಕರ್ತವ್ಯಗಳನ್ನು, ವಿಶೇಷ ಅಧಿಕಾರಗಳನ್ನು ಮತ್ತು ಹೊಣೆಗಾರಿಕೆಗಳನ್ನು ಭಾರತದಾದ್ಯಂತ ಹೊಂದಿರತಕ್ಕದ್ದು.

(3) ಸಬ್ – ಇನ್‌ಸ್ಪೆಕ್ಟರ್‌ನ ದರ್ಜೆಯ ಅಥವಾ ಅದಕ್ಕೂ ಮೇಲ್ಪಟ್ಟ ದರ್ಜೆಯ ಏಜೆನ್ಸಿಯ ಯಾರೇ ಅಧಿಕಾರಿಯು, ಕೇಂದ್ರ ಸರ್ಕಾರವು ಈ ಬಗ್ಗೆ ಮಾಡುವ ಆದೇಶಗಳಿಗೆ ಒಳಪಟ್ಟು, ತತ್ಕಾಲದಲ್ಲಿ ಆತನು ಇರುವ ಪ್ರದೇಶದಲ್ಲಿನ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಯಾವುವೇ ಅಧಿಕಾರಗಳನ್ನು ಭಾರತದಾದ್ಯಂತ ಚಲಾಯಿಸಬಹುದು ಹಾಗೂ ಅಂಥ ಅಧಿಕಾರಗಳನ್ನು ಹಾಗೆ ಚಲಾಯಿಸುವಾಗ, ಆತನನ್ನು, ಮೇಲೆ ಹೇಳಿದಂಥ ಯಾವುವೇ ಅಂಥ ಆದೇಶಗಳಿಗೆ ಒಳಪಟ್ಟು, ಅವನ ಠಾಣೆಯ ಪರಿಮಿತಿಯೊಳಗೆ ಅಂಥ ಒಬ್ಬ ಅಧಿಕಾರಿಯ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವಂಥ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯೆಂದು ಭಾವಿಸತಕ್ಕದ್ದು.

**4. ರಾಷ್ಟ್ರೀಯ ತನಿಖಾ ಏಜೆನ್ಸಿಯ ಅಧೀಕ್ಷಣೆ.–** (1) ಏಜೆನ್ಸಿಯ ಅಧೀಕ್ಷಣಾ ಅಧಿಕಾರವು ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(2) ಏಜೆನ್ಸಿಯ ಆಡಳಿತವು, ಕೇಂದ್ರ ಸರ್ಕಾರವು ಈ ಬಗ್ಗೆ ನೇಮಕ ಮಾಡಿದ ಮಹಾ ನಿರ್ದೇಶಕ ಎಂಬ ಪದನಾಮವುಳ್ಳ ಅಧಿಕಾರಿಯಲ್ಲಿ ನಿಹಿತವಾಗಿರತಕ್ಕದ್ದು, ಆತನು ಏಜೆನ್ಸಿಯ ಸಂಬಂಧದಲ್ಲಿ, ಕೇಂದ್ರ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂತೆ ರಾಜ್ಯದಲ್ಲಿನ ಪೊಲೀಸ್ ದಳದ ಸಂಬಂಧದಲ್ಲಿ ಪೊಲೀಸ್ ಮಹಾನಿರ್ದೇಶಕರು ಚಲಾಯಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

**5. ಏಜೆನ್ಸಿಯ ರಚನೆಯ ರೀತಿ ಮತ್ತು ಸದಸ್ಯರ ಸೇವಾ ಷರತ್ತುಗಳು.–** ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಏಜೆನ್ಸಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ರಚಿಸತಕ್ಕದ್ದು ಮತ್ತು ಏಜೆನ್ಸಿಯಲ್ಲಿ ನಿಯೋಜಿತರಾದ ವ್ಯಕ್ತಿಗಳ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ – III

## ರಾಷ್ಟ್ರೀಯ ತನಿಖಾ ಏಜೆನ್ಸಿಯಿಂದ ತನಿಖೆ

**6. ಅನುಸೂಚಿತ ಅಪರಾಧಗಳ ತನಿಖೆ.–** (1) ಯಾವುದೇ ಅನುಸೂಚಿತ ಅಪರಾಧಕ್ಕೆ ಸಂಬಂಧಿಸಿದಂತೆ, ಸಂಹಿತೆಯ 154ನೇ ಪ್ರಕರಣದ ಮೇರೆಗೆ ಮಾಹಿತಿಯನ್ನು ಸ್ವೀಕರಿಸಿದ ಮತ್ತು ಅದನ್ನು ದಾಖಲಿಸಿಕೊಂಡ ತರುವಾಯ, ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು ಕೂಡಲೇ ರಾಜ್ಯ ಸರ್ಕಾರಕ್ಕೆ ವರದಿಯನ್ನು ಕಳುಹಿಸಿಕೊಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ವರದಿಯನ್ನು ಸ್ವೀಕರಿಸಿದ ತರುವಾಯ, ರಾಜ್ಯ ಸರ್ಕಾರವು ಸಾಧ್ಯವಾದಷ್ಟು ತ್ವರಿತವಾಗಿ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕಳುಹಿಸಿಕೊಡತಕ್ಕದ್ದು.

(3) ರಾಜ್ಯ ಸರ್ಕಾರದಿಂದ ವರದಿಯನ್ನು ಸ್ವೀಕರಿಸಿದ ತರುವಾಯ, ಕೇಂದ್ರ ಸರ್ಕಾರವು, ವರದಿಯನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗೆ, ರಾಜ್ಯ ಸರ್ಕಾರದಿಂದ ದೊರೆತ ಅಥವಾ ಇತರ ಮೂಲಗಳಿಂದ ಪಡೆದ ಮಾಹಿತಿಯ ಆಧಾರದ ಮೇಲೆ ಆ ಅಪರಾಧವು ಅನುಸೂಚಿತ ಅಪರಾಧವೇ ಅಥವಾ ಅಲ್ಲವೇ ಎಂಬುದನ್ನು, ಹಾಗೂ ಅಪರಾಧದ ಗಂಭೀರತೆಯನ್ನು ಮತ್ತು ಇತರ ಸುಸಂಗತ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಅದು ಏಜೆನ್ಸಿಯು ತನಿಖೆ ಮಾಡಲು ಯೋಗ್ಯವಾದ ಪ್ರಕರಣವೇ ಅಥವಾ ಅಲ್ಲವೇ ಎಂಬುದನ್ನು ಸಹ ತೀರ್ಮಾನಿಸತಕ್ಕದ್ದು.

(4) ಅಪರಾಧವು ಅನುಸೂಚಿತ ಅಪರಾಧವೆಂದು ಮತ್ತು ಅದು ಏಜೆನ್ಸಿಯು ತನಿಖೆ ಮಾಡಲು ಯೋಗ್ಯವಾದ ಪ್ರಕರಣವಾಗಿದೆಯೆಂದು ಕೇಂದ್ರ ಸರ್ಕಾರವು ಅಭಿಪ್ರಾಯ ಪಟ್ಟಲ್ಲಿ, ಅದು ಸದರಿ ಅಪರಾಧದ ಬಗ್ಗೆ ತನಿಖೆ ಮಾಡಲು ಏಜೆನ್ಸಿಗೆ ನಿರ್ದೇಶಿಸತಕ್ಕದ್ದು.

(5) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ತನಿಖೆ ಮಾಡುವುದು ಅಗತ್ಯವಾದ ಒಂದು ಅನುಸೂಚಿತ ಅಪರಾಧವನ್ನು ಎಸಗಲಾಗಿದೆಯೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟಲ್ಲಿ, ಸದರಿ ಅಪರಾಧದ ಬಗ್ಗೆ ತನಿಖೆ ಮಾಡುವಂತೆ ಅದು ತಾನಾಗಿಯೇ ಏಜೆನ್ಸಿಗೆ ನಿರ್ದೇಶಿಸಬಹುದು.

(6) ಉಪಪ್ರಕರಣ (4) ಅಥವಾ ಉಪಪ್ರಕರಣ (5)ರ ಮೇರೆಗೆ ಯಾವುದೇ ನಿರ್ದೇಶನ ನೀಡಲಾಗಿರುವಲ್ಲಿ, ರಾಜ್ಯ ಸರ್ಕಾರವು ಮತ್ತು ಆ ಅಪರಾಧದ ಬಗ್ಗೆ ತನಿಖೆ ಮಾಡುತ್ತಿರುವ ರಾಜ್ಯ ಸರ್ಕಾರದ ಯಾರೇ ಪೊಲೀಸ್ ಅಧಿಕಾರಿಯು ತನಿಖೆಯನ್ನು ಮುಂದುವರಿಸತಕ್ಕದ್ದಲ್ಲ ಹಾಗೂ ಕೂಡಲೇ ಸಂಬಂಧಪಟ್ಟ ದಸ್ತಾವೇಜುಗಳನ್ನು ಮತ್ತು ದಾಖಲೆಗಳನ್ನು ಏಜೆನ್ಸಿಗೆ ರವಾನಿಸತಕ್ಕದ್ದು.

(7) ಸಂದೇಹಗಳ ನಿವಾರಣೆಗಾಗಿ, ಏಜೆನ್ಸಿಯು ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಳ್ಳುವವರೆಗೆ, ತನಿಖೆಯನ್ನು ಮುಂದುವರಿಸುವುದು ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

**7. ತನಿಖೆಯನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲು ಅಧಿಕಾರ.–** ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧದ ಬಗ್ಗೆ ತನಿಖೆ ಮಾಡುತ್ತಿರುವಾಗ, ಏಜೆನ್ಸಿಯು, ಅಪರಾಧದ ಗಂಭೀರತೆಯನ್ನು ಮತ್ತು ಇತರ ಸುಸಂಗತ ಅಂಶಗಳನ್ನು ಗಮನದಲ್ಲಿರಿಸಿಕೊಂಡು,–

(ಎ) ತನಿಖೆಯಲ್ಲಿ ಸ್ವತಃ ಭಾಗವಹಿಸುವಂತೆ ರಾಜ್ಯ ಸರ್ಕಾರವನ್ನು ಕೋರುವುದು ವಿಹಿತವೆನಿಸಿದರೆ ಹಾಗೆ ಕೋರಬಹುದು; ಅಥವಾ

(ಬಿ) ಕೇಂದ್ರ ಸರ್ಕಾರದ ಪೂರ್ವಾನುಮೋದನೆಪಡೆದು, ಅಪರಾಧದ ತನಿಖೆಗಾಗಿ ಮತ್ತು ಅಧಿವಿಚಾರಣೆಗಾಗಿ ಪ್ರಕರಣವನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಬಹುದು.

**8. ಸಂಬಂಧಿತ ಅಪರಾಧಗಳ ತನಿಖೆಗೆ ಅಧಿಕಾರ.–** ಯಾವುದೇ ಅನುಸೂಚಿತ ಅಪರಾಧದ ಬಗ್ಗೆ ತನಿಖೆ ಮಾಡುವಾಗ, ಆಪಾದಿತನು ಯಾವ ಅಪರಾಧವನ್ನು ಎಸಗಿದ್ದಾನೆಂದು ಆರೋಪಿಸಲಾಗಿದೆಯೋ ಆ ಯಾವುದೇ ಇತರ ಅಪರಾಧವು ಅನುಸೂಚಿತ ಅಪರಾಧಕ್ಕೆ ಸಂಬಂಧಿಸಿದ ಅಪರಾಧವಾಗಿದ್ದರೆ, ಆ ಅಪರಾಧದ ಬಗ್ಗೆ ಸಹ ಏಜೆನ್ಸಿಯು ತನಿಖೆ ನಡೆಸಬಹುದು.

**9. ರಾಜ್ಯ ಸರ್ಕಾರವು ರಾಷ್ಟ್ರೀಯ ತನಿಖಾ ಏಜೆನ್ಸಿಗೆ ನೆರವು ನೀಡುವುದು.–** ಅನುಸೂಚಿತ ಅಪರಾಧಗಳ ಬಗ್ಗೆ ತನಿಖೆ ಮಾಡುವುದಕ್ಕಾಗಿ ರಾಜ್ಯ ಸರ್ಕಾರವು ಏಜೆನ್ಸಿಗೆ ಎಲ್ಲ ರೀತಿಯ ನೆರವನ್ನು ಮತ್ತು ಸಹಕಾರವನ್ನು ನೀಡತಕ್ಕದ್ದು.

**10. ಅನುಸೂಚಿತ ಅಪರಾಧಗಳ ಬಗ್ಗೆ ತನಿಖೆ ಮಾಡಲು ರಾಜ್ಯ ಸರ್ಕಾರದ ಅಧಿಕಾರ.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಈ ಅಧಿನಿಯಮದಲ್ಲಿ ಒಳಗೊಂಡಿರುವುದು ಯಾವುದೂ, ಯಾವುದೇ ಅನುಸೂಚಿತ ಅಪರಾಧದ ಬಗ್ಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗಿನ ಇತರ ಅಪರಾಧಗಳ ಬಗ್ಗೆ ತನಿಖೆ ನಡೆಸುವುದಕ್ಕೆ ಮತ್ತು ಪ್ರಾಸಿಕ್ಯೂಟ್ ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರಗಳಿಗೆ ಬಾಧಕ ಉಂಟುಮಾಡತಕ್ಕದ್ದಲ್ಲ.

## ಅಧ್ಯಾಯ – IV

## ವಿಶೇಷ ನ್ಯಾಯಾಲಯಗಳು

**11. ವಿಶೇಷ ನ್ಯಾಯಾಲಯಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅನುಸೂಚಿತ ಅಪರಾಧಗಳ ಅಧಿವಿಚಾರಣೆಗಾಗಿ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಕ್ಕಾಗಿ ಅಥವಾ ಪ್ರದೇಶಗಳಿಗಾಗಿ, ಅಥವಾ ಅಂಥ ಮೊಕದ್ದಮೆಗಾಗಿ ಅಥವಾ ಮೊಕದ್ದಮೆಗಳ ವರ್ಗಕ್ಕಾಗಿ ಅಥವಾ ಗುಂಪಿಗಾಗಿ ಒಂದು ಅಥವಾ ಹೆಚ್ಚು ವಿಶೇಷ ನ್ಯಾಯಾಲಯಗಳನ್ನು ರಚಿಸಬಹುದು.

(2) ಯಾವುದೇ ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆ ಉದ್ಭವಿಸಿದಲ್ಲಿ, ಅದನ್ನು ಕೇಂದ್ರ ಸರ್ಕಾರಕ್ಕೆ ಉಲ್ಲೇಖಿಸತಕ್ಕದ್ದು, ಮತ್ತು ಈ ವಿಷಯದಲ್ಲಿ ಅದರ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

(3) ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯ ಶಿಫಾರಸ್ಸಿನ ಮೇಲೆ ಕೇಂದ್ರ ಸರ್ಕಾರವು ನೇಮಕ ಮಾಡುವ ನ್ಯಾಯಾಧೀಶನು ವಿಶೇಷ ನ್ಯಾಯಾಲಯದ, ಅಧ್ಯಕ್ಷತೆ ವಹಿಸತಕ್ಕದ್ದು.

(4) ಏಜೆನ್ಸಿಯು, ವಿಶೇಷ ನ್ಯಾಯಾಲಯದ ಅಧ್ಯಕ್ಷತೆ ವಹಿಸಲು ನ್ಯಾಯಾಧೀಶನನ್ನು ನೇಮಕ ಮಾಡುವಂತೆ ಕೋರಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗೆ ಅರ್ಜಿಯನ್ನು ಸಲ್ಲಿಸಬಹುದು.

(5) (4)ನೇ ಉಪ-ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ನಂತರ, ಮುಖ್ಯ ನ್ಯಾಯಮೂರ್ತಿಯು, ಸಾಧ್ಯವಾದಷ್ಟು ಬೇಗನೆ ಮತ್ತು ಏಳು ದಿನಗಳಿಗೆ ಮೀರದಂತೆ, ವಿಶೇಷ ನ್ಯಾಯಾಲಯದ ಅಧ್ಯಕ್ಷತೆ ವಹಿಸಲು ನೇಮಕ ಮಾಡುವುದಕ್ಕಾಗಿ ನ್ಯಾಯಾಧೀಶನ ಹೆಸರನ್ನು ಶಿಫಾರಸು ಮಾಡತಕ್ಕದ್ದು.

(6) ಕೇಂದ್ರ ಸರ್ಕಾರವು, ಅಗತ್ಯವೆನಿಸಿದರೆ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯ ಶಿಫಾರಸ್ಸಿನ ಮೇಲೆ, ವಿಶೇಷ ನ್ಯಾಯಾಲಯಕ್ಕೆ ಅಡಿಷನಲ್ ನ್ಯಾಯಾಧೀಶನನ್ನು ಅಥವಾ ಅಡಿಷನಲ್ ನ್ಯಾಯಾಧೀಶರುಗಳನ್ನು ನೇಮಕ ಮಾಡಬಹುದು.

(7) ಒಬ್ಬ ವ್ಯಕ್ತಿಯು, ಅಂಥ ನೇಮಕದ ನಿಕಟಪೂರ್ವದಲ್ಲಿ, ಯಾವುದೇ ರಾಜ್ಯದಲ್ಲಿ ಸೆಷನ್ಸ್ ನ್ಯಾಯಾಧೀಶನಾಗಿದ್ದ ಅಥವಾ ಅಡಿಷನಲ್ ಸೆಷನ್ಸ್ ನ್ಯಾಯಾಧೀಶನಾಗಿದ್ದ ಹೊರತು, ವಿಶೇಷ ನ್ಯಾಯಾಲಯದ ನ್ಯಾಯಾಧೀಶನಾಗಿ ಅಥವಾ ಅಡಿಷನಲ್ ನ್ಯಾಯಾಧೀಶನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

(8) ಸಂದೇಹಗಳ ನಿವಾರಣೆಗಾಗಿ, ವಿಶೇಷ ನ್ಯಾಯಾಲಯದ ನ್ಯಾಯಾಧೀಶನಾಗಿ ಅಥವಾ ಅಡಿಷನಲ್ ನ್ಯಾಯಾಧೀಶನಾಗಿ ನೇಮಕಗೊಂಡ ವ್ಯಕ್ತಿಯು, ಅವನು ಯಾವ ಸೇವೆಗೆ ಸೇರಿರುವನೋ ಆ ಸೇವೆಯಲ್ಲಿ ಅವನಿಗೆ ಅನ್ವಯವಾಗುವ ನಿಯಮಗಳ ಮೇರೆಗೆ ವಯೋನಿವೃತ್ತಿ ವಯಸ್ಸನ್ನು ತಲುಪಿದರೂ ಕೂಡ, ಅದು ಅವನು ಹಾಗೆ ನ್ಯಾಯಾಧೀಶನಾಗಿ ಮತ್ತು ಅಡಿಷನಲ್ ನ್ಯಾಯಾಧೀಶನಾಗಿ ಮುಂದುವರಿಯುವುದಕ್ಕೆ ಬಾಧಕ ಉಂಟುಮಾಡತಕ್ಕದ್ದಲ್ಲವೆಂದು ಮತ್ತು ಕೇಂದ್ರ ಸರ್ಕಾರವು ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ನಿರ್ದಿಷ್ಟಪಡಿಸಿದ ದಿನಾಂಕದವರೆಗೆ ಅಥವಾ ಅವನ ಮುಂದಿರುವ ಮೊಕದ್ದಮೆಯ ಅಥವಾ ಮೊಕದ್ದಮೆಗಳ ಅಧಿವಿಚಾರಣೆಯು ಮುಕ್ತಾಯವಾಗುವವರೆಗೆ ಅವನು ನ್ಯಾಯಾಧೀಶನಾಗಿ ಮುಂದುವರಿಯತಕ್ಕದ್ದೆಂದು ನಿರ್ದೇಶಿಸಬಹುದು ಎಂದು ಈ ಮೂಲಕ ಉಪಬಂಧಿಸಲಾಗಿದೆ.

(9) ಯಾರೇ ಅಡಿಷನಲ್ ನ್ಯಾಯಾಧೀಶನನ್ನು ಅಥವಾ ಅಡಿಷನಲ್ ನ್ಯಾಯಾಧೀಶರುಗಳನ್ನು ವಿಶೇಷ ನ್ಯಾಯಾಲಯಕ್ಕೆ ನೇಮಕ ಮಾಡಿರುವಲ್ಲಿ, ವಿಶೇಷ ನ್ಯಾಯಾಲಯದ ನ್ಯಾಯಾಧೀಶನು ಕಾಲಕಾಲಕ್ಕೆ ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ, ತಾನು ಹಾಗೂ ಅಡಿಷನಲ್ ನ್ಯಾಯಾಧೀಶನು ಅಥವಾ ಅಡಿಷನಲ್ ನ್ಯಾಯಾಧೀಶರುಗಳು ಸೇರಿದಂತೆ ಎಲ್ಲಾ ನ್ಯಾಯಾಧೀಶರ ನಡುವೆ ವಿಶೇಷ ನ್ಯಾಯಾಲಯದ ಕಾರ್ಯಕಲಾಪಗಳ ಹಂಚಿಕೆಗಾಗಿ ಮತ್ತು ತಾನು ಗೈರು ಹಾಜರಾದ ಅಥವಾ ಯಾರೇ ಅಡಿಷನಲ್ ನ್ಯಾಯಾಧೀಶನು ಗೈರು ಹಾಜರಾದ ಸಂದರ್ಭದಲ್ಲಿ ತುರ್ತು ಕಾರ್ಯಕಲಾಪಗಳ ವಿಲೆಗಾಗಿ ಸಹ ಉಪಬಂಧ ಕಲ್ಪಿಸಬಹುದು.

**12. ಉಪವೇಶನದ ಸ್ಥಳ.–** ವಿಶೇಷ ನ್ಯಾಯಾಲಯವು, ಸ್ವಪ್ರೇರಣೆಯಿಂದ, ಅಥವಾ ಪಬ್ಲಿಕ್ ಪ್ರಾಸಿಕ್ಯೂಟರನು ಸಲ್ಲಿಸಿದ ಅರ್ಜಿಯ ಮೇಲೆ ತನ್ನ ಯಾವುವೇ ವ್ಯವಹರಣೆಗಳಿಗಾಗಿ ತಾನು ಸಾಮಾನ್ಯವಾಗಿ ಉಪವೇಶನ ನಡೆಸುವ ಸ್ಥಳವಲ್ಲದ ಇತರ ಯಾವುದೇ ಸ್ಥಳದಲ್ಲಿ ಉಪವೇಶನ ನಡೆಸುವುದು ವಿಹಿತ ಅಥವಾ ಅಪೇಕ್ಷಣೀಯವೆಂದು ತಾನು ಪರಿಗಣಿಸಿದಲ್ಲಿ ಅದು ಹಾಗೆ ಮಾಡಬಹುದು.

**13. ವಿಶೇಷ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ.–** (1) ಸಂಹಿತೆಯಲ್ಲಿ ಏನೇ ಒಳಗೊಂಡಿದ್ದರೂ, ಏಜೆನ್ಸಿಯು ತನಿಖೆ ಮಾಡಿದ ಪ್ರತಿಯೊಂದು ಅನುಸೂಚಿತ ಅಪರಾಧವನ್ನು ಯಾವ ವಿಶೇಷ ನ್ಯಾಯಾಲಯದ

ಸ್ಥಳೀಯ ಅಧಿಕಾರ ವ್ಯಾಪ್ತಿಯಲ್ಲಿ ಆ ಅಪರಾಧವನ್ನು ಎಸಗಲಾಗಿದೆಯೋ ಆ ವಿಶೇಷ ನ್ಯಾಯಾಲಯವು ಮಾತ್ರವೇ ಅಧಿವಿಚಾರಣೆ ಮಾಡತಕ್ಕದ್ದು.

(2) ರಾಜ್ಯದಲ್ಲಿನ ಪ್ರಚಲಿತ ಪರಿಸ್ಥಿತಿಯ ಜರೂರತೆಯನ್ನು ಗಮನದಲ್ಲಿರಿಸಿಕೊಂಡು,–

(ಎ) ನ್ಯಾಯಯುತ, ನಿಷ್ಪಕ್ಷಪಾತ ಅಥವಾ ಶೀಘ್ರ ಅಧಿವಿಚಾರಣೆ ನಡೆಸುವುದು ಸಾಧ್ಯವಿಲ್ಲದಿದ್ದರೆ,

(ಬಿ) ಶಾಂತಿಗೆ ಭಂಗ ಉಂಟಾಗದಂತೆ ಅಥವಾ ಆಪಾದಿತನ, ಸಾಕ್ಷಿದಾರರ, ಪಬ್ಲಿಕ್ ಪ್ರಾಸಿಕ್ಯೂಟರನ ಅಥವಾ ವಿಶೇಷ ನ್ಯಾಯಾಲಯದ ನ್ಯಾಯಧೀಶನ ಅಥವಾ ಅವರಲ್ಲಿ ಯಾರೊಬ್ಬರ ಸುರಕ್ಷತೆಗೆ ಗಂಭೀರ ಅಪಾಯವಾಗದ ಹಾಗೆ ಅಧಿವಿಚಾರಣೆ ಮಾಡುವುದು ಕಾರ್ಯ ಸಾಧ್ಯವಿಲ್ಲದಿದ್ದರೆ, ಅಥವಾ

(ಸಿ) ನ್ಯಾಯದ ಹಿತದೃಷ್ಟಿಯಿಂದ ಅನ್ಯಥಾ ಸಾಧ್ಯವಿರದಿದ್ದರೆ

– ಸರ್ವೋಚ್ಚ ನ್ಯಾಯಾಲಯವು, ಒಂದು ವಿಶೇಷ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಮೊಕದ್ದಮೆಯನ್ನು ಆ ರಾಜ್ಯದಲ್ಲಿರುವ ಅಥವಾ ಇತರ ಯಾವುದೇ ರಾಜ್ಯದಲ್ಲಿರುವ ಇತರ ಯಾವುದೇ ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಬಹುದು ಮತ್ತು ಉಚ್ಚ ನ್ಯಾಯಾಲಯವು, ಆ ರಾಜ್ಯದಲ್ಲಿರುವ ಒಂದು ವಿಶೇಷ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಮೊಕದ್ದಮೆಯನ್ನು ಆ ರಾಜ್ಯದಲ್ಲಿರುವ ಇತರ ಯಾವುದೇ ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಬಹುದು.

(3) ಸರ್ವೋಚ್ಚ ನ್ಯಾಯಾಲಯವು ಅಥವಾ ಸಂದರ್ಭಾನುಸಾರ ಉಚ್ಚ ನ್ಯಾಯಾಲಯವು ಕೇಂದ್ರ ಸರ್ಕಾರದ ಅಥವಾ ಹಿತಾಸಕ್ತಿಯುಳ್ಳ ಪಕ್ಷಕಾರನ ಅರ್ಜಿಯ ಮೇಲೆ ಈ ಪ್ರಕರಣದ ಮೇರೆಗೆ ಕಾರ್ಯಪ್ರವೃತ್ತವಾಗಬಹುದು ಹಾಗೂ ಅಂಥ ಯಾವುದೇ ಅರ್ಜಿಯನ್ನು ಭಾರತದ ಅಟಾರ್ನಿ ಜನರಲ್‌ನು ಅರ್ಜಿದಾರನಾಗಿದ್ದಾಗ ಹೊರತು, ಒಂದು ಅಫಿಡವಿಟ್‌ನ ಅಥವಾ ದೃಢೀಕರಣ ಪತ್ರದ ಮೂಲಕ ಸಮರ್ಥಿತವಾದ ಒಂದು ಪ್ರಸ್ತಾವದ ಮೂಲಕ ಆಜ್ಞೆಗಾಗಿ ಕೋರಿ ಸಲ್ಲಿಸತಕ್ಕದ್ದು.

**14. ಇತರ ಅಪರಾಧಗಳಿಗೆ ಸಂಬಂಧಪಟ್ಟಂತೆ ವಿಶೇಷ ನ್ಯಾಯಾಲಯಗಳ ಅಧಿಕಾರಗಳು.–** (1) ವಿಶೇಷ ನ್ಯಾಯಾಲಯವು, ಯಾವುದೇ ಅಪರಾಧದ ಅಧಿವಿಚಾರಣೆ ಮಾಡುತ್ತಿರುವಾಗ, ಆಪಾದಿತನ ಮೇಲೆ ಸಂಹಿತೆಯ ಮೇರೆಗೆ ಯಾವ ಇತರ ಅಪರಾಧದ ಆರೋಪ ಹೊರಿಸಬಹುದೋ ಆ ಯಾವುದೇ ಇತರ ಆರೋಪವನ್ನು ಸಹ, ಆ ಅಪರಾಧವು ಅಂಥ ಇತರ ಅಪರಾಧದೊಂದಿಗೆ ಸಂಬಂಧ ಹೊಂದಿದ್ದರೆ, ಅದೇ ಅಧಿವಿಚಾರಣೆಯ ಕಾಲದಲ್ಲಿ ಅಧಿವಿಚಾರಣೆ ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧದ ಯಾವುದೇ ಅಧಿವಿಚಾರಣೆಯನ್ನು ಮಾಡುತ್ತಿರುವ ಸಂದರ್ಭದಲ್ಲಿ, ಆಪಾದಿತ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಅಥವಾ ಇತರ ಯಾವುದೇ ಕಾನೂನಿನ ಮೇರೆಗೆ, ಯಾವುದೇ ಇತರ ಅಪರಾಧವನ್ನು ಎಸಗಿದ್ದಾನೆಂದು ಕಂಡುಬಂದರೆ, ವಿಶೇಷ ನ್ಯಾಯಾಲಯವು ಅವನನ್ನು ಅಂಥ ಇತರ ಅಪರಾಧದ ಅಪರಾಧಿಯೆಂದು ನಿರ್ಣಯಿಸಬಹುದು ಮತ್ತು ಈ ಅಧಿನಿಯಮದ ಮೂಲಕ ಅಥವಾ ಸಂದರ್ಭಾನುಸಾರ ಅಂಥ ಇತರ ಕಾನೂನಿನ ಮೇರೆಗೆ ಅಧಿಕೃತಗೊಳಿಸಿದ ಯಾವುದೇ ಶಿಕ್ಷೆಯ ಆದೇಶವನ್ನು ಹೊರಡಿಸಬಹುದು ಅಥವಾ ದಂಡನೆಯನ್ನು ವಿಧಿಸಬಹುದು.

**15. ಪಬ್ಲಿಕ್ ಪ್ರಾಸಿಕ್ಯೂಟರುಗಳು.–** (1) ಕೇಂದ್ರ ಸರ್ಕಾರವು ಒಬ್ಬ ವ್ಯಕ್ತಿಯನ್ನು ಪಬ್ಲಿಕ್ ಪ್ರಾಸಿಕ್ಯೂಟರನಾಗಿ ನೇಮಕ ಮಾಡತಕ್ಕದ್ದು ಮತ್ತು ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು ಅಡಿಷನಲ್ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ಅಥವಾ ಅಡಿಷನಲ್ ಪಬ್ಲಿಕ್ ಪ್ರಾಸಿಕ್ಯೂಟರುಗಳಾಗಿ ನೇಮಕ ಮಾಡಬಹುದು:

ಪರಂತು, ಕೇಂದ್ರ ಸರ್ಕಾರವು ಯಾವುದೇ ಮೊಕದ್ದಮೆಗಾಗಿ ಅಥವಾ ಮೊಕದ್ದಮೆಗಳ ವರ್ಗಕ್ಕಾಗಿ ಅಥವಾ ಗುಂಪಿಗಾಗಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರನನ್ನು ಸಹ ನೇಮಕ ಮಾಡಬಹುದು.

(2) ಒಬ್ಬ ವ್ಯಕ್ತಿಯು, ಅವನು ಏಳು ವರ್ಷಗಳಿಗಿಂತ ಕಡಿಮೆ ಇರದಷ್ಟು ಅವಧಿ ನ್ಯಾಯವಾದಿಯಾಗಿ ವೃತ್ತಿ ನಡೆಸಿದ್ದ ಹೊರತು ಅಥವಾ ಕೇಂದ್ರದ ಅಥವಾ ರಾಜ್ಯದ ಅಡಿಯಲ್ಲಿ, ಏಳು ವರ್ಷಗಳಿಗಿಂತ ಕಡಿಮೆ ಇರದಷ್ಟು ಅವಧಿ ಕಾನೂನಿನ ವಿಶೇಷ ಜ್ಞಾನದ ಅಗತ್ಯವಿರುವ ಯಾವುದೇ ಹುದ್ದೆಯನ್ನು ಹೊಂದಿದ್ದ ಹೊರತು, ಅವನು ಈ ಪ್ರಕರಣದ ಮೇರೆಗೆ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ಅಥವಾ ಅಡಿಷನಲ್ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ಅಥವಾ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗೆ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ಅಥವಾ ಅಡಿಷನಲ್ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ಅಥವಾ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯನ್ನು ಸಂಹಿತೆಯ 2ನೇ ಪ್ರಕರಣದ (ಯು) ಖಂಡದ ಅರ್ಥವ್ಯಾಪ್ತಿಯಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರನೆಂದು ಭಾವಿಸತಕ್ಕದ್ದು ಮತ್ತು ಸಂಹಿತೆಯ ಉಪಬಂಧಗಳು ತದನುಸಾರವಾಗಿ ಪರಿಣಾಮಕಾರಿಯಾಗಿರತಕ್ಕದ್ದು.

**16. ವಿಶೇಷ ನ್ಯಾಯಾಲಯಗಳ ಪ್ರಕ್ರಿಯೆ ಮತ್ತು ಅಧಿಕಾರಗಳು.–** (1) ವಿಶೇಷ ನ್ಯಾಯಾಲಯವು, ಅಧಿವಿಚಾರಣೆಗಾಗಿ ಆಪಾದಿತನನ್ನು ತನಗೆ ಒಪ್ಪಿಸದೇ ಇದ್ದಾಗ್ಯೂ, ಅಂಥ ಅಪರಾಧ ಘಟಿಸಿರುವುದನ್ನು ಸೂಚಿಸುವ ಸಂಗತಿಗಳ ಫಿರ್ಯಾದನ್ನು ಸ್ವೀಕರಿಸಿದ ಮೇಲೆ ಅಥವಾ ಅಂಥ ಸಂಗತಿಗಳನ್ನು ಪೊಲೀಸರು ವರದಿ ಮಾಡಿದ ಮೇಲೆ, ಯಾವುದೇ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳಬಹುದು.

(2) ವಿಶೇಷ ನ್ಯಾಯಾಲಯದ ಮೂಲಕ ಅಧಿವಿಚಾರಣೆ ಮಾಡಬಹುದಾದ ಅಪರಾಧವು, ಮೂರು ವರ್ಷಗಳನ್ನು ಮೀರದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾದ ಅಪರಾಧವಾಗಿರುವಲ್ಲಿ, ವಿಶೇಷ ನ್ಯಾಯಾಲಯವು, ಸಂಹಿತೆಯ 260ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಅಥವಾ 262ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸಂಹಿತೆಯಲ್ಲಿ ನಿಯಮಿಸಿದ ಕಾರ್ಯವಿಧಾನಕ್ಕೆ ಅನುಸಾರವಾಗಿ ಅಪರಾಧವನ್ನು ಕ್ಷಿಪ್ರವಾಗಿ ಅಧಿವಿಚಾರಣೆ ಮಾಡಬಹುದು ಮತ್ತು ಸಂಹಿತೆಯ 263 ರಿಂದ 265 ರವರೆಗಿನ ಪ್ರಕರಣಗಳ ಉಪಬಂಧಗಳು ಸಾಧ್ಯವಾಗಬಹುದಾದಷ್ಟುಮಟ್ಟಿಗೆ ಅಂಥ ಅಧಿವಿಚಾರಣೆಗೆ ಅನ್ವಯವಾಗತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಕ್ಷಿಪ್ರ ಅಧಿವಿಚಾರಣೆಯನ್ನು ನಡೆಸುತ್ತಿರುವ ಸಂದರ್ಭದಲ್ಲಿ, ಮೊದಕದ್ದಮೆಯ ಸ್ವರೂಪವು ಅದನ್ನು ಕ್ಷಿಪ್ರವಾಗಿ ಅಧಿವಿಚಾರಣೆ ಮಾಡಲು ಅಪೇಕ್ಷಣೀಯವಲ್ಲದಂಥದ್ದು ಆಗಿದೆ ಎಂದು ವಿಶೇಷ ನ್ಯಾಯಾಲಯಕ್ಕೆ ಕಂಡು ಬಂದಾಗ, ವಿಶೇಷ ನ್ಯಾಯಾಲಯವು ಈಗಾಗಲೇ ವಿಚಾರಣೆ ಮಾಡಿರಬಹುದಾದ ಯಾರೇ ಸಾಕ್ಷಿದಾರನನ್ನು ಪುನಃ ಕರೆಸತಕ್ಕದ್ದು ಮತ್ತು ಅಂಥ ಅಪರಾಧದ ಅಧಿವಿಚಾರಣೆಗಾಗಿ ಸಂಹಿತೆಯ ಉಪಬಂಧಗಳ ಮೂಲಕ ಉಪಬಂಧಿಸಿದ ರೀತಿಯಲ್ಲಿ ಆ ಮೊಕದ್ದಮೆಯನ್ನು ಮರು ವಿಚಾರಣೆಗೆ ಮುಂದಾಗತಕ್ಕದ್ದು ಮತ್ತು ಸದರಿ ಉಪಬಂಧಗಳು, ಮ್ಯಾಜಿಸ್ಟ್ರೇಟರಿಗೆ ಮತ್ತು ಅವರ ಸಂಬಂಧದಲ್ಲಿ ಅವು ಅನ್ವಯವಾಗುವಂತೆಯೇ ವಿಶೇಷ ನ್ಯಾಯಾಲಯದ ಸಂಬಂಧದಲ್ಲಿಯೂ ಅನ್ವಯವಾಗತಕ್ಕದ್ದು:

ಮತ್ತೂ ಪರಂತು, ಈ ಪ್ರಕರಣದ ಮೇರೆಗಿನ ಕ್ಷಿಪ್ರ ಅಧಿವಿಚಾರಣೆಯಲ್ಲಿ ಯಾವುದೇ ಅಪರಾಧ ನಿರ್ಣಯದ ಸಂದರ್ಭದಲ್ಲಿ ಒಂದು ವರ್ಷ ಮೀರದ ಅವಧಿಯ ಕಾರಾವಾಸದ ಮತ್ತು ಐದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಿ ತೀರ್ಪು ನೀಡುವುದು ವಿಶೇಷ ನ್ಯಾಯಾಲಕ್ಕೆ ಕಾನೂನುಬದ್ಧವಾದುದಾಗಿರತಕ್ಕದ್ದು.

(3) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು ವಿಶೇಷ ನ್ಯಾಯಾಲಯವು, ಯಾವುದೇ ಅಪರಾಧದ ಅಧಿವಿಚಾರಣೆಯ ಉದ್ದೇಶಕ್ಕಾಗಿ, ಸೆಷನ್ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಸೆಷನ್ ನ್ಯಾಯಾಲಯದ ಮುಂದೆ ಅಧಿವಿಚಾರಣೆಗಾಗಿ ಸಂಹಿತೆಯಲ್ಲಿ ನಿಯಮಿಸಿದ ಕಾರ್ಯವಿಧಾನಕ್ಕೆ ಆದಷ್ಟೂ ಅನುಗುಣವಾಗಿರುವಂತೆ ತಾನು ಒಂದು ಸೆಷನ್ ನ್ಯಾಯಾಲಯವಾಗಿದ್ದರೆ ಹೇಗೋ ಹಾಗೆ, ಅಂಥ ಅಪರಾಧದ ಅಧಿವಿಚಾರಣೆ ಮಾಡತಕ್ಕದ್ದು.

(4) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, 13ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಿದ ಪ್ರತಿಯೊಂದು ಮೊಕದ್ದಮೆಯ ಬಗ್ಗೆ, ಸಂಹಿತೆಯ 406ನೇ ಪ್ರಕರಣದ ಮೇರೆಗೆ ಅಂಥ ಮೊಕದ್ದಮೆಯನ್ನು ಅಂಥ ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಲಾಗಿದ್ದರೆ ಹೇಗೋ ಹಾಗೆ ವ್ಯವಹರಿಸತಕ್ಕದ್ದು.

(5) ಈ ಸಂಹಿತೆಯಲ್ಲಿ ಏನೇ ಒಳಗೊಂಡಿದ್ದರೂ, ಆದರೆ ಸಂಹಿತೆಯ 299ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ವಿಶೇಷ ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಿದರೆ, ಕಾರಣಗಳನ್ನು ದಾಖಲಿಸಿ ಆಪಾದಿತನ ಅಥವಾ ಆತನ ಪ್ಲೀಡರ್‌ನ ಗೈರು ಹಾಜರಿಯಲ್ಲಿ ಅಧಿವಿಚಾರಣೆಯನ್ನು ಮುಂದುವರಿಸಬಹುದು ಮತ್ತು ಪಾಟಿ ಸವಾಲಿಗಾಗಿ ಸಾಕ್ಷಿದಾರರನ್ನು ಪುನಃ ಕರೆಸಲು ಆಪಾದಿತನಿಗೆ ಇರುವ ಹಕ್ಕಿಗೆ ಒಳಪಟ್ಟು, ಯಾರೇ ಸಾಕ್ಷಿದಾರನ ಸಾಕ್ಷ್ಯವನ್ನು ದಾಖಲಿಸಿಕೊಳ್ಳಬಹುದು.

**17. ಸಾಕ್ಷಿದಾರರಿಗೆ ರಕ್ಷಣೆ.–** (1) ಈ ಸಂಹಿತೆಯಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ವ್ಯವಹರಣೆಗಳನ್ನು ರಹಸ್ಯವಾಗಿ ನಡೆಸಬೇಕೆಂದು ವಿಶೇಷ ನ್ಯಾಯಾಲಯವು ಇಚ್ಛಿಸಿದಲ್ಲಿ, ಅದು ತನ್ನ ಕಾರಣಗಳನ್ನು ದಾಖಲಿಸಿ, ಹಾಗೆ ರಹಸ್ಯವಾಗಿ ನಡೆಸಬಹುದು.

(2) ತನ್ನ ಮುಂದಿರುವ ಯಾವುದೇ ವ್ಯವಹರಣೆಯಲ್ಲಿ ಸಾಕ್ಷಿದಾರನು ಅಥವಾ ಅಂಥ ಸಾಕ್ಷಿದಾರನ ಸಂಬಂಧದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರನು ಸಲ್ಲಿಸಿದ ಅರ್ಜಿಯ ಮೇಲೆ ಅಥವಾ ಸ್ವಪ್ರೇರಣೆಯಿಂದ, ಅಂಥ ಸಾಕ್ಷಿದಾರನ ಜೀವಕ್ಕೆ ಅಪಾಯವಿದೆಯೆಂದು ವಿಶೇಷ ನ್ಯಾಯಾಲಯಕ್ಕೆ ಮನವರಿಕೆಯಾದಲ್ಲಿ, ಅದು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ಅದು ಅಂಥ ಸಾಕ್ಷಿದಾರನ ಗುರುತು ಮತ್ತು ವಿಳಾಸವನ್ನು ರಹಸ್ಯವಾಗಿಡುವುದಕ್ಕೆ ತಾನು ಸೂಕ್ತವೆಂದು ಭಾವಿಸುವಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು.

(3) ವಿಶೇಷವಾಗಿ, ಮತ್ತು (2)ನೇ ಉಪ ಪ್ರಕರಣದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ವಿಶೇಷ ನ್ಯಾಯಾಲಯವು ಆ ಉಪ ಪ್ರಕರಣದ ಮೇರೆಗೆ ತೆಗೆದುಕೊಳ್ಳಬಹುದಾದ ಕ್ರಮಗಳಲ್ಲಿ,–

(ಎ) ವಿಶೇಷ ನ್ಯಾಯಾಲಯವು ನಿರ್ಧರಿಸುವ ಸ್ಥಳದಲ್ಲಿ ವ್ಯವಹರಣೆಗಳನ್ನು ನಡೆಸುವುದು;

(ಬಿ) ತನ್ನ ಆದೇಶಗಳು ಮತ್ತು ತೀರ್ಪುಗಳಲ್ಲಿ ಅಥವಾ ಸಾರ್ವಜನಿಕರಿಗೆ ನೋಡುವ ಅವಕಾಶವಿರಬಹುದಾದ ಮೊಕದ್ದಮೆಯ ಯಾವುವೇ ದಾಖಲೆಗಳಲ್ಲಿ ಸಾಕ್ಷಿದಾರರ ಹೆಸರುಗಳು ಮತ್ತು ವಿಳಾಸಗಳನ್ನು ನಮೂದಿಸುವುದನ್ನು ತಪ್ಪಿಸುವುದು;

(ಸಿ) ಸಾಕ್ಷಿದಾರರ ಗುರುತು ಮತ್ತು ವಿಳಾಸವನ್ನು ಬಹಿರಂಗಪಡಿಸಿಲ್ಲ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಯಾವುದೇ ನಿರ್ದೇಶನಗಳನ್ನು ನೀಡುವುದು; ಮತ್ತು

(ಡಿ) ಅಂಥ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ಅಥವಾ ಯಾವುವೇ ವ್ಯವಹರಣೆಗಳನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಯಾವುದೇ ರೀತಿಯಲ್ಲಿ ಪ್ರಕಟಿಸತಕ್ಕದ್ದಲ್ಲವೆಂದು ಆದೇಶಿಸುವ ತೀರ್ಮಾನವು

– ಒಳಗೊಳ್ಳಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ಕೈಗೊಂಡ ಯಾವುದೇ ತೀರ್ಮಾನವನ್ನು ಅಥವಾ ನೀಡಿದ ನಿರ್ದೇಶನವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**18. ಪ್ರಾಸಿಕ್ಯೂಷನ್ ಹೂಡಲು ಮಂಜೂರಾತಿ.–** ಈ ಅಧಿನಿಯಮದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಸಂಬಂಧದಲ್ಲಿ ಏಜೆನ್ಸಿಯ ಯಾರೇ ಸದಸ್ಯನ ಅಥವಾ ಆತನ ಪರವಾಗಿ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯ ವಿರುದ್ಧ, ಕೇಂದ್ರ ಸರ್ಕಾರದ ಪೂರ್ವಮಂಜೂರಾತಿಯನ್ನು ಪಡೆದ ಹೊರತು, ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಪ್ರಾಸಿಕ್ಯೂಷನನ್ನು, ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**19. ವಿಶೇಷ ನ್ಯಾಯಾಲಯವು ನಡೆಸುವ ಅಧಿವಿಚಾರಣೆಗೆ ಪ್ರಾಶಸ್ತ್ಯ.–** ಈ ಅಧಿನಿಯಮದ ಮೇರೆಗೆ ವಿಶೇಷ ನ್ಯಾಯಾಲಯವು ನಡೆಸುವ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ಎಲ್ಲ ಕೆಲಸದ ದಿನಗಳಂದು ದೈನಂದಿನ ಆಧಾರದಲ್ಲಿ ನಡೆಸತಕ್ಕದ್ದು ಮತ್ತು (ವಿಶೇಷ ನ್ಯಾಯಾಲಯವಲ್ಲದ) ಇತರ ಯಾವುದೇ ನ್ಯಾಯಾಲಯದಲ್ಲಿ ಆಪಾದಿತನ ವಿರುದ್ಧದ ಇತರ ಯಾವುದೇ ಮೊಕದ್ದಮೆಯ ಅಧಿವಿಚಾರಣೆಗಿಂತಲೂ ಹೆಚ್ಚಿನ ಪ್ರಾಶಸ್ತ್ಯ ನೀಡತಕ್ಕದ್ದು. ಮತ್ತು ಅಂಥ ಇತರ ಮೊಕದ್ದಮೆಯ ಅಧಿವಿಚಾರಣೆಗಿಂತಲೂ ಹೆಚ್ಚಿನ ಆದ್ಯತೆ ನೀಡಿ ಮುಕ್ತಾಯಗೊಳಿಸತಕ್ಕದ್ದು ಹಾಗೂ ಅದಕ್ಕನುಸಾರವಾಗಿ ಅಂಥ ಇತರ ಮೊಕದ್ದಮೆಯ ಅಧಿವಿಚಾರಣೆಯನ್ನು, ಅಗತ್ಯವೆನಿಸಿದರೆ ಸ್ಥಗಿತಗೊಳಿಸತಕ್ಕದ್ದು.

**20. ನಿಯತ ನ್ಯಾಯಾಲಯಗಳಿಗೆ ಮೊಕದ್ದಮೆಗಳನ್ನು ವರ್ಗಾಯಿಸಲು ಅಧಿಕಾರ.–** ಯಾವುದೇ ಅಪರಾಧದ ಸಂಜ್ಞಾನವನ್ನು ತೆಗೆದುಕೊಂಡ ನಂತರ, ವಿಶೇಷ ನ್ಯಾಯಾಲಯವು, ಈ ಅಪರಾಧವು ತಾನು ಅಧಿವಿಚಾರಣೆ ಮಾಡುವಂತಹದ್ದಲ್ಲವೆಂದು ಅಭಿಪ್ರಾಯಪಟ್ಟರೆ, ಅದು, ಅಂಥ ಅಪರಾಧದ ಅಧಿವಿಚಾರಣೆ ಮಾಡಲು ಅಧಿಕಾರ ವ್ಯಾಪ್ತಿ ಹೊಂದಿರದೆ ಇದ್ದರೂ, ಸಂಹಿತೆಯ ಮೇರೆಗೆ ಅಧಿಕಾರ ವ್ಯಾಪ್ತಿ ಹೊಂದಿರುವ ಯಾವುದೇ ನ್ಯಾಯಾಲಯಕ್ಕೆ ಅಂಥ ಅಪರಾಧದ ಅಧಿವಿಚಾರಣೆಗೆ ಮೊಕದ್ದಮೆಯನ್ನು ವರ್ಗಾಯಿಸತಕ್ಕದ್ದು ಹಾಗೂ ಯಾವ ನ್ಯಾಯಾಲಯಕ್ಕೆ ಮೊಕದ್ದಮೆಯನ್ನು ವರ್ಗಾಯಿಸಲಾಗಿದೆಯೋ ಆ ನ್ಯಾಯಾಲಯವು ಅಪರಾಧದ ಸಂಜ್ಞಾನವನ್ನು ತಾನು ತೆಗೆದುಕೊಂಡಿದ್ದಿದ್ದರೆ ಹೇಗೋ ಹಾಗೆ ಅಪರಾಧದ ಅಧಿವಿಚಾರಣೆಯನ್ನು ಮುಂದುವರೆಸಬಹುದು.

**21. ಅಪೀಲುಗಳು.–** (1) ಸಂಹಿತೆಯಲ್ಲಿ ಏನೇ ಒಳಗೊಂಡಿದ್ದರೂ, ವಿಶೇಷ ನ್ಯಾಯಾಲಯದ ಯಾವುದೇ ತೀರ್ಪಿನ, ಶಿಕ್ಷೆಯ ಅಥವಾ ವಾದಕಾಲೀನ ಆದೇಶವಾಗಿರದ ಆದೇಶದ ವಿರುದ್ಧ ಸಂಗತಿಗಳು ಮತ್ತು ಕಾನೂನಿನ ಅಂಶಗಳು – ಈ ಎರಡರ ಮೇಲೆ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು.

(2) (1)ನೇ ಉಪ–ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು ಉಚ್ಚ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರ ಪೀಠವು ವಿಚಾರಣೆಮಾಡತಕ್ಕದ್ದು ಮತ್ತು ಸಾಧ್ಯವಾದಷ್ಟುಮಟ್ಟಿಗೆ, ಅಪೀಲನ್ನು ಅಂಗೀಕರಿಸಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯೊಳಗೆ ವಿಲೆಮಾಡತಕ್ಕದ್ದು.

(3) ಮೇಲೆ ಹೇಳಿದಂತೆ ಹೊರತು, ವಿಶೇಷ ನ್ಯಾಯಾಲಯದ ಯಾವುದೇ ತೀರ್ಪಿನ, ಶಿಕ್ಷೆಯ ಅಥವಾ ವಾದಕಾಲೀನ ಆದೇಶವೂ ಸೇರಿದಂತೆ ಯಾವುದೇ ಆದೇಶದ ವಿರುದ್ಧ ಯಾವುದೇ ನ್ಯಾಯಾಲಯಕ್ಕೆ ಯಾವುದೇ ಅಪೀಲನ್ನು ಅಥವಾ ಪುನರೀಕ್ಷಣಾ ಅರ್ಜಿಯನ್ನು ಸಲ್ಲಿಸಲು ಅವಕಾಶವಿರತಕ್ಕದ್ದಲ್ಲ.

(4) ಸಂಹಿತೆಯ 378ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಜಾಮೀನು ಮಂಜೂರು ಮಾಡಿ ಅಥವಾ ನಿರಾಕರಿಸಿ ವಿಶೇಷ ನ್ಯಾಯಾಲಯವು ಮಾಡಿದ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು.

(5) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು, ಯಾವ ತೀರ್ಪಿನ, ಶಿಕ್ಷೆಯ ಅಥವಾ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗುತ್ತಿದೆಯೋ ಅದರ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಸಲ್ಲಿಸತಕ್ಕದ್ದು:

ಪರಂತು, ಅಪೀಲುದಾರನು ಮೂವತ್ತು ದಿನಗಳ ಅವಧಿಯ ಒಳಗೆ ಅಪೀಲು ಸಲ್ಲಿಸಲು ಸಾಧ್ಯವಾಗದಿದ್ದುದಕ್ಕೆ ಸಾಕಷ್ಟು ಕಾರಣವಿತ್ತೆಂದು ಉಚ್ಚ ನ್ಯಾಯಾಲಯಕ್ಕೆ, ಮನವರಿಕೆಯಾದರೆ, ಅದು ಮೂವತ್ತು ದಿನಗಳ ಅವಧಿಯ ಮುಕ್ತಾಯದ ತರುವಾಯವೂ ಅಪೀಲನ್ನು ಅಂಗೀಕರಿಸಬಹುದು:

ಮತ್ತೂ ಪರಂತು, ಯಾವುದೇ ಅಪೀಲನ್ನು ತೊಂಬತ್ತು ದಿನಗಳ ಅವಧಿಯ ಮುಕ್ತಾಯದ ತರುವಾಯ ಅಂಗೀಕರಿಸತಕ್ಕದ್ದಲ್ಲ.

**22. ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಥವಾ ಎಲ್ಲ ಅಧಿನಿಯಮಗಳ ಮೇರೆಗಿನ ಅಪರಾಧಗಳ ಅಧಿವಿಚಾರಣೆಗಾಗಿ ಒಂದು ಅಥವಾ ಹೆಚ್ಚು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬಹುದು.

(2) ಈ ಅಧ್ಯಾಯದ ಉಪಬಂಧಗಳು (1)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಸ್ಥಾಪಿಸಿದ ವಿಶೇಷ ನ್ಯಾಯಾಲಯಗಳಿಗೆ ಅನ್ವಯವಾಗತಕ್ಕದ್ದು ಮತ್ತು ಈ ಮುಂದಿನ ಮಾರ್ಪಾಟುಗಳಿಗೆ ಒಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದು, ಎಂದರೆ:–

(i) 11 ಮತ್ತು 15ನೇ ಪ್ರಕರಣಗಳಲ್ಲಿ "ಕೇಂದ್ರ ಸರ್ಕಾರ" ಕ್ಕೆ ಮಾಡಿದ ಉಲ್ಲೇಖಗಳನ್ನು "ರಾಜ್ಯ ಸರ್ಕಾರ"ಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

(ii) 13ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ "ಏಜೆನ್ಸಿ"ಗೆ ಮಾಡಿದ ಉಲ್ಲೇಖವನ್ನು "ರಾಜ್ಯ ಸರ್ಕಾರದ ತನಿಖಾ ಏಜೆನ್ಸಿ"ಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು;

(iii) 13ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ "ಭಾರತದ ಅಟಾರ್ನಿ ಜನರಲ್" ನಿಗೆ ಮಾಡಿದ ಉಲ್ಲೇಖವನ್ನು "ರಾಜ್ಯದ ಅಡ್ವೋಕೇಟ್ ಜನರಲ್" ನಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

(3) ವಿಶೇಷ ನ್ಯಾಯಾಲಯಕ್ಕೆ ಈ ಅಧಿನಿಯಮದ ಮೂಲಕ ಪ್ರದತ್ತವಾದ ಅಧಿಕಾರ ವ್ಯಾಪ್ತಿಯನ್ನು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಸಂಬಂಧದಲ್ಲಿ (1)ನೇ ಉಪ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸುವವರೆಗೆ, ಸಂಹಿತೆಯಲ್ಲಿ ಏನೇ

ಒಳಗೊಂಡಿದ್ದರೂ, ಅಂಥ ಅಪರಾಧವನ್ನು ಯಾವ ವಿಭಾಗದಲ್ಲಿ ಮಾಡಲಾಗಿದೆಯೋ ಆ ವಿಭಾಗದ ಸೆಷನ್ ನ್ಯಾಯಾಲಯವು ಚಲಾಯಿಸತಕ್ಕದ್ದು ಮತ್ತು ಅದು ಈ ಅಧ್ಯಾಯದಲ್ಲಿ ಉಪಬಂಧಿಸಿದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಹಾಗೂ ಆ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(4) ರಾಜ್ಯ ಸರ್ಕಾರವು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿದ ದಿನಾಂಕದಂದು ಮತ್ತು ಆ ದಿನಾಂಕದಿಂದ, ವಿಶೇಷ ನ್ಯಾಯಾಲಯದ ಮುಂದೆ ನಡೆಯಬೇಕಾಗಿದ್ದಂಥ ಈ ಅಧಿನಿಯಮದ ಉಪಬಂಧಗಳ ಮೇರೆಗೆ ರಾಜ್ಯ ಸರ್ಕಾರವು ತನಿಖೆ ಮಾಡಿದ ಯಾವುದೇ ಅಪರಾಧದ ಅಧಿವಿಚಾರಣೆಯು, ಅದನ್ನು ಸ್ಥಾಪಿಸಿದ ದಿನಾಂಕದಂದು ಆ ನ್ಯಾಯಾಲಯಕ್ಕೆ ವರ್ಗಾವಣೆಯಾಗತಕ್ಕದ್ದು.

## ಅಧ್ಯಾಯ – V

### ಸಂಕೀರ್ಣ

**23. ನಿಯಮಗಳನ್ನು ರಚಿಸಲು ಉಚ್ಚ ನ್ಯಾಯಾಲಯದ ಅಧಿಕಾರ.–** ಉಚ್ಚ ನ್ಯಾಯಾಲಯವು, ತನ್ನ ಅಧಿಕಾರವ್ಯಾಪ್ತಿಯ ಪ್ರದೇಶದೊಳಗಿರುವ ವಿಶೇಷ ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ತಾನು ಅವಶ್ಯವೆಂದು ಭಾವಿಸಬಹುದಾದಂಥ ನಿಯಮಗಳನ್ನು ರಚಿಸಬಹುದು.

**24. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ಆ ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ವಿಹಿತವೆಂದು ತನಗೆ ಕಂಡುಬರುವಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**25. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಏಜೆನ್ಸಿಯ ರಚನೆಯ ರೀತಿ ಮತ್ತು 5ನೇ ಪ್ರಕರಣದ ಮೇರೆಗೆ ಏಜೆನ್ಸಿಯಲ್ಲಿ ನಿಯೋಜಿತರಾದ ವ್ಯಕ್ತಿಗಳ ಸೇವಾ ಷರತ್ತುಗಳು;

(ಬಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**26. ನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು.–** ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

## ಅನುಸೂಚಿ

**[ಪ್ರಕರಣ 2(1) (ಎಫ್)ನ್ನು ನೋಡಿ]**

1. ಅಣುಶಕ್ತಿ ಅಧಿನಿಯಮ, 1962 (1962ರ 33)
2. ಕಾನೂನುಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1967 (1967ರ 37)
3. ವಿಮಾನ ಅಪಹರಣ–ನಿರೋಧ ಅಧಿನಿಯಮ, 1982 (1982ರ 65)
4. ನಾಗರಿಕ ವಿಮಾನಯಾನ ಸುರಕ್ಷತೆ ವಿರುದ್ಧದ ಕಾನೂನುಬಾಹಿರ ಕೃತ್ಯಗಳ ದಮನ ಅಧಿನಿಯಮ, 1982 (1982ರ 66)
5. ಸಾರ್ಕ್ ಒಡಂಬಡಿಕೆ (ಭಯೋತ್ಪಾದನೆ ದಮನ) ಅಧಿನಿಯಮ, 1993 (1993ರ 36)
6. ಸಮುದ್ರ ನೌಕಾಯಾನ ಸುರಕ್ಷತೆಯ ವಿರುದ್ಧದ ಕಾನೂನುಬಾಹಿರ ಕೃತ್ಯಗಳ ದಮನ ಮತ್ತು ಕಾಂಟಿನೆಂಟಲ್ ಷೆಲ್ಫ್‌ನಲ್ಲಿ ಸ್ಥಾಪಿಸಿದ ಸ್ಥಿರ ಅಂಕಣಗಳ ಅಧಿನಿಯಮ, 2002 (2002ರ 69)
7. ಸಮೂಹ ನಾಶಕ ಆಯುಧಗಳು ಮತ್ತು ಅವುಗಳ ಪ್ರೇಷಣ ವ್ಯವಸ್ಥೆಗಳ (ಕಾನೂನುಬಾಹಿರ ಚಟುವಟಿಕೆಗಳ ನಿಷೇಧ) ಅಧಿನಿಯಮ, 2005 (2005ರ 21)
8. (ಎ) ಭಾರತ ದಂಡ ಸಂಹಿತೆಯ (1860ರ 45) ಅಧ್ಯಾಯ –VI [121 ರಿಂದ 130 ರವರೆಗಿನ ಪ್ರಕರಣಗಳ (ಎರಡನ್ನೂ ಒಳಗೊಂಡು)] ಮೇರೆಗಿನ ಅಪರಾಧಗಳು.

   (ಬಿ) ಭಾರತ ದಂಡ ಸಂಹಿತೆಯ (1860ರ 45) 489 – ಎ ಯಿಂದ 489 – ಈ ವರೆಗಿನ ಪ್ರಕರಣಗಳ (ಎರಡನ್ನೂ ಒಳಗೊಂಡು) – ಮೇರೆಗಿನ ಅಪರಾಧಗಳು.

* * * * *

ಮುದ್ರಕರು: ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು. (ಕಾ.ಸೂ. ಪಿ- - ಪಿ-3)